KATK510018322018

## ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಕುಣಿಗಲ್

**ಉಪಸ್ಥಿತರು: ಶ್ರೀಮತಿ ಸುಜಾತ ಎ ಬಿ.**

**ಬಿ.ಎ.ಎಲ್., ಎಲ್.ಎಲ್.ಬಿ.,**

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ

ದರ್ಜೆ ನ್ಯಾಯಿಕ ದಂಡಾಧಿಕಾರಿಗಳು

**ದಿನಾಂಕಃ 1ನೇ ಜುಲೈ ಮಾಹೆ- 2026**

**ಸಿ.ಸಿ.ಸಂಖ್ಯೆಃ 849/2018**

**ಪಿರ್ಯಾದುದಾರರು :** **ಕರ್ನಾಟಕ ಸರ್ಕಾರವನ್ನು ಪ್ರತಿನಿಧಿಸುವವರು**

**ಪೊಲೀಸ್ ಉಪನಿರೀಕ್ಷಕರು**

ಕುಣಿಗಲ್ ಪೊಲೀಸ್ ಠಾಣೆ, ಕುಣಿಗಲ್.

(ಪ್ರತಿನಿಧಿಸುವವರು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು)

**-ವಿರುದ್ಧ-**

**ಆರೋಪಿತರು :** **ಎ1. ಲಕ್ಷ್ಮಣಗೌಡ ಬಿನ್ ನರಸಿಂಹಯ್ಯ**

ವಯಸ್ಸು ಸುಮಾರು 30 ವರ್ಷ,

**ಎ2. ನಾರಯಣ್ಣಪ್ಪ ಬಿನ್ ಗಂಗಣ್ಣಗೌಡ**

ವಯಸ್ಸು ಸುಮಾರು 54 ವರ್ಷ,

ಇಬ್ಬರ ವಾಸಃ ಮಲ್ಲಘಟ್ಟ ಹಳ್ಳಿ ,

ಕುಣಿಗಲ್ ಟೌನ್, ತುಮಕೂರು

**( ಆರೋಪಿ ಪರ ಶ್ರೀ.ಎನ್.ಪಿ., ವಕೀಲರು)**

| | |
|---|---|
| ಪ್ರಕರಣ ದಾಖಲಾದ ದಿನಾಂಕ | 06.05.2018 |
| ಪ್ರಕರಣದ ಸ್ವರೂಪ | ಭಾ.ದಂ.ಸಂ.ಕಲಂ.171(ಇ) |
| ವಿಚಾರಣೆ ಪ್ರಾರಂಭವಾದ ದಿನಾಂಕ | 18.02.2021 |
| ವಿಚಾರಣೆ ಮುಕ್ತಾಯವಾದ ದಿನಾಂಕ | 06.02.2026 |
| ತೀರ್ಪು ನೀಡಿದ ದಿನಾಂಕ | 01.07.2026 |
| ಪ್ರಕರಣದ ಒಟ್ಟು ಕಾಲಾವಧಿ | ವರ್ಷ ತಿಂಗಳು ದಿನಗಳು<br>08 01 25 |

## ತೀರ್ಪು

ಕುಣಿಗಲ್ ಪೊಲೀಸ್ ಠಾಣೆಯ ಠಾಣಾಧಿಕಾರಿಯು ಮೇಲ್ಕಂಡ ಆರೋಪಿತರ ವಿರುದ್ಧ ಭಾ.ದಂ.ಸಂ.ಕಲಂ.171(ಇ) ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಎಸಗಿರುತ್ತಾರೆಂದು ಪ್ರಸ್ತುತ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

**2.** **ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ವಿವರಗಳು ಈ ಕೆಳಕಂಡಂತಿರುತ್ತವೆ:-**

ದಿನಾಂಕ 05/05/2018 ರಂದು ರಾತ್ರಿ 09.200 ಗಂಟೆಯ ಸಮಯದಲ್ಲಿ ಕುಣಿಗಲ್ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಕುಣಿಗಲ್ ಟೌನ್ ಮಲ್ಲಾಘಟ್ಟ ಗ್ರಾಮದ 2ನೇ ಆರೋಪಿಗೆ ಸೇರಿದ ಕೊಟ್ಟಿಗೆಯಲ್ಲಿ ರೂ.19,200/- ಬೆಲೆಯ 128 ಸೀರೆಗಳನ್ನು ಕಾಂಗ್ರೇಸ್ ಪಕ್ಷದ ಪರ ಚುನಾವಣಾ ಪ್ರಚಾರಕ್ಕೆ ಮತದಾರರಿಗೆ ಹಂಚಲು 1 ಮತ್ತು 2ನೇ ಆರೋಪಿತರು ಸೇರಿ ಇರಿಸಿದ್ದು 2018 ರ ಕರ್ನಾಟಕ ವಿಧಾನಸಭಾ ಚುನಾವಣೆ ಕುಣಿಗಲ್ ವಿಧಾನಸಭಾ ಕ್ಷೇತ್ರ 131 ರ ಚುನಾವಣಾ ನೀತಿಸಂಹಿತೆ ಆದೇಶವನ್ನು ಉಲ್ಲಂಘನೆ ಮಾಡಿದ್ದಾರೆ ಎಂದು ಚಾಸಾ-1 ರವರು ನೀಡಿದ ದೂರಿನ ಮೇಲೆ ಪೊಲೀಸರು ಇತರೆ ತನಿಖೆ ಕೈಗೊಂಡು ಮೇಲ್ಕಂಡ ಆರೋಪಿತರ ವಿರುದ್ಧ ಭಾ.ದಂ.ಸಂ. ಕಲಂ 171 (ಇ) ರ ಅಡಿಯಲ್ಲಿ ತನಿಖೆಯನ್ನು ಪೂರ್ಣಗೊಳಿಸಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**3.** ಆರೋಪಿತರು ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನಿನ ಮೇಲೆ ಬಿಡುಗಡೆಗೊಂಡಿರುತ್ತಾರೆ. ಆರೋಪಿತರಿಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ.207 ರಡಿಯಲ್ಲಿ ಅಭಿಯೋಜನೆಯ ದಾಖಲೆಗಳನ್ನು ಪೂರೈಸಲಾಗಿದೆ. ನಂತರ ಭಾ.ದಂ.ಸಂ. ಕಲಂ 171 (ಇ) ರಡಿಯಲ್ಲಿ ಆರೋಪಿತರ ವಿರುದ್ಧ ಆಪಾದನೆಯ ಸಾರಾಂಶವನ್ನು ರಚಿಸಿ, ಓದಿ ಹೇಳಲಾಯಿತು. ಆರೋಪಿತರ ತಪ್ಪನ್ನು ಒಪ್ಪಿಕೊಳ್ಳದೇ ವಿಚಾರಣೆಯಾಗಬೇಕೆಂದು ತಿಳಿಸಿರುತ್ತಾರೆ.

**4.** ನಂತರ ಅಭಿಯೋಜನೆಯವರು ತಮ್ಮ ಪರ ಪ್ರಾಸಾ-1 ರಿಂದ ಪ್ರಾಸಾ-9 ರ ಸಾಕ್ಷಿದಾರರನ್ನು ನ್ಯಾಯಾಲಯದ ಮುಂದೆ ವಿಚಾರಣೆ ಮಾಡಿಕೊಂಡು ನಿಪಿ-1 ರಿಂದ 10 ರ ನಿಶಾನೆಗಳನ್ನು ಗುರುತಿಸಿಕೊಂಡಿರುತ್ತಾರೆ. ದಂ.ಪ್ರ.ಸಂ. ಕಲಂ 313 ರ ರೀತ್ಯಾ ಪಡೆದುಕೊಳ್ಳಬೇಕಾದ ಆರೋಪಿತರ ಹೇಳಿಕೆಯನ್ನು ನ್ಯಾಯಾಲಯದಲ್ಲಿ ದಾಖಲಿಸಲಾಯಿತು. ಆರೋಪಿತರು ಅಭಿಯೋಜನೆಯ ಪರ ಸಾಕ್ಷಿದಾರರು ನೀಡಿರುವ ಸಾಕ್ಷ್ಯವನ್ನು ಅಲ್ಲಗಳೆದಿರುತ್ತಾರೆ. ತಮ್ಮ ಪರವಾಗಿ ಯಾವುದೇ ಸಾಕ್ಷ್ಯವಿಲ್ಲವೆಂದು ನುಡಿದಿರುತ್ತಾರೆ.

**5.** ನಂತರ ವಾದ, ಪ್ರತಿವಾದಗಳನ್ನು ಆಲಿಸಲಾಯಿತು. ಕೆಳಕಂಡ ಅಂಶಗಳು ಪ್ರಕರಣದ ಇತ್ಯರ್ಥಕ್ಕಾಗಿ ಮೂಡಿ ಬಂದಿತು.

> **1.** ದಿನಾಂಕ 05/05/2018 ರಂದು ರಾತ್ರಿ 09.200 ಗಂಟೆಯ ಸಮಯದಲ್ಲಿ ಕುಣಿಗಲ್ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಕುಣಿಗಲ್ ಟೌನ್ ಮಲ್ಲಾಘಟ್ಟ ಗ್ರಾಮದ 2ನೇ ಆರೋಪಿಗೆ ಸೇರಿದ ಕೊಟ್ಟಿಗೆಯಲ್ಲಿ ರೂ.19,200/- ಬೆಲೆಯ 128 ಸೀರೆಗಳನ್ನು ಕಾಂಗ್ರೇಸ್ ಪಕ್ಷದ ಪರ ಚುನಾವಣಾ ಪ್ರಚಾರಕ್ಕೆ ಮತದಾರರಿಗೆ ಹಂಚಲು 1 ಮತ್ತು 2ನೇ ಆರೋಪಿತರು ಸೇರಿ ಇರಿಸಿದ್ದು 2018 ರ ಕರ್ನಾಟಕ ವಿಧಾನಸಭಾ ಚುನಾವಣೆ ಕುಣಿಗಲ್ ವಿಧಾನಸಭಾ ಕ್ಷೇತ್ರ 131 ರ ಚುನಾವಣಾ ನೀತಿಸಂಹಿತೆ ಆದೇಶವನ್ನು ಉಲ್ಲಂಘನೆ ಮಾಡಿದ್ದು, ಆ ಮೂಲಕ ಭಾ.ದಂ.ಸಂ. ಕಲಂ 171 (ಇ) ರಡಿಯಲ್ಲಿ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆ

ಎಂಬುದನ್ನು ಅಭಿಯೋಜನೆಯವರು ಸಂಶಯತೀತವಾಗಿ ರುಜುವಾತು ಪಡಿಸುತ್ತಾರೆಯೇ?

**2.** ಏನು ಆದೇಶ?

**6.** ಮೇಲ್ಕಂಡ ಅಂಶಗಳನ್ನು ಈ ಕೆಳಕಂಡಂತೆ ಉತ್ತರಿಸುತ್ತೇನೆ.

**ಅಂಶ ಸಂಖ್ಯೆ : 1- ನಕರಾತ್ಮಕವಾಗಿ**

**ಅಂಶ ಸಂಖ್ಯೆ : 2- ಅಂತಿಮ ಆದೇಶದಂತೆ,**

**ಈ ಕೆಳಕಂಡ ಕಾರಣಗಳಿಗಾಗಿ**

## ::ಕಾರಣಗಳು::

**7.** **ಅಂಶ ಸಂಖ್ಯೆ 1:-** ಅಭಿಯೋಜನೆಯವರು ಆರೋಪಿತರ ಮೇಲಿರುವ ಆರೋಪವನ್ನು ರುಜುವಾತುಪಡಿಸುವ ಸಲುವಾಗಿ 13 ಜನ ಸಾಕ್ಷಿದಾರರನ್ನು ತೋರಿಸಿದ್ದು ಅವರಲ್ಲಿ ತಮ್ಮ ಪರವಾಗಿ ಪ್ರಾಸಾ-1 ರಿಂದ 9 ಎಂಬುದಾಗಿ ವಿಚಾರಣೆಗೆ ಗುರುತು ಪಡಿಸಿಕೊಂಡಿರುತ್ತಾರೆ ಹಾಗೂ ಅಭಿಯೋಜನೆಯವರು ತಮ್ಮ ಪರವಾಗಿ ನಿಪಿ-1 ರಿಂದ 10 ರ ದಾಖಲೆಗಳನ್ನು ನಿಶಾನೆಗಳಾಗಿ ಗುರುತಿಸಿಕೊಂಡಿರುತ್ತಾರೆ. ಸದರಿ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ನಿಪಿ-1 ದೂರು, ನಿಪಿ-2 ಪಂಚನಾಮೆ, ನಿಪಿ.3 ಅಮಾನತ್ತು ಪಂಚನಾಮೆ ನಿಪಿ.4 ಸಿಡಿ, ನಿಪಿ-5 ಆದೇಶ ಪ್ರತಿ, ನಿಪಿ-6 ಪಹಣಿ ಕೋರಿದ ಬಗ್ಗೆ ಪತ್ರ, ನಿಪಿ-7 ಪ್ರಥಮ ವರ್ತಮಾನ ವರದಿ, ನಿಪಿ-8 ಸ್ವಿಕೃತಿ , ನಿಪಿ-9 ಪಿಎಫ್, ನಿಪಿ10- ವರದಿ. ಮಾ.ಮು.1 ಮತ್ತು 2-128 ಸೀರೆಗಳು ತುಂಬಿದ 2 ರಟ್ಟಿನ ಬಾಕ್ಸ್ ಗಳು.

**8.** ಈ ಪ್ರಕರಣದಲ್ಲಿ ಅಭಿಯೋಜನೆಯು ದೂರುದಾರ ಸಾಕ್ಷಿದಾರರಾದ ಚಾಸಾ-1 ರವರನ್ನು ಪ್ರಾಸಾ-1 ಎಂದು ವಿಚಾರಣೆಗೆ ಒಳಪಡಿಸಿರುತ್ತಾರೆ. ಪ್ರಾಸಾ.1 ಕೈಲಾಸಮೂರ್ತಿ ರವರು ತಮ್ಮ ಸಾಕ್ಷ್ಯದಲ್ಲಿ ತನ್ನನ್ನು ದಿನಾಂಕಃ 05.05.2018 ರಂದು ನಿಗಧಿಯಾಗಿದ್ದ ಕರ್ನಾಟಕ ರಾಜ್ಯ ವಿಧಾನಸಭೆಯ ಚುನಾವಣೆಯ ಸಂಬಂಧ ಕುಣಿಗಲ್ ವಿಧಾನಸಭಾ ವ್ಯಾಪ್ತಿಯಲ್ಲಿ ಚುನಾವಣೆ ನೀತಿ ಸಂಹಿತೆ ಉಲ್ಲಂಘನೆ ತಡೆಯುವ ಸಂಬಂಧ ತನ್ನನ್ನು ಮುಖ್ಯಸ್ಥರಾಗಿ ಮಾಡಿ ಒಂದು ತಂಡವನ್ನು ರಚಿಸಿದ್ದು, ಆ ತಂಡದಲ್ಲಿ ಚಾಸಾ.2 ಹಾಗೂ ಇತರರನ್ನು ಮಾನ್ಯ ಜಿಲ್ಲಾಧಿಕಾರಿಗಳು ನೇಮಿಸಿದ್ದು, ಅದರಂತೆ ದಿನಾಂಕಃ 05.05.2018 ರಂದು ತಾನು ಮತ್ತು ತನ್ನ

ತಂಡ ಕುಣಿಗಲ್ ನಗರ ಪ್ರದೇಶದಲ್ಲಿ ಕರ್ತವ್ಯ ನಿರ್ವಹಿಸುವಾಗ್ಗೆ ಕಂಟ್ರೋಲ್ ರೂಮ್ ಅಂದರೆ ತಹಸೀಲ್ದಾರ್ ಕಛೇರಿಯಿಂದ ಸಂಜೆ 6.30 ಕ್ಕೆ ಒಂದು ಮಾಹಿತಿ ಬಂದಿದ್ದು, ಅದರಲ್ಲಿ ಕುಣಿಗಲ್ ನಗರದ ಮಲ್ಲಾಘಟ್ಟದಲ್ಲಿ ಚುನಾವಣಾ ಅಕ್ರಮ ನಡೆಸಲು ಲಕ್ಷ್ಮಣಗೌಡ ಮತ್ತು ನಾರಾಯಣಪ್ಪರವರು ಕೊಟ್ಟಿಗೆಯಲ್ಲಿ ಕೆಲವು ವಸ್ತುಗಳನ್ನು ದಾಸ್ತಾನು ಇಟ್ಟಿದ್ದಾರೆ ಎಂದು ತಿಳಿಸಲಾಗಿ ಅದರಂತೆ ತಾನು ಮತ್ತು ತನ್ನ ತಂಡದ ಸದಸ್ಯರು ಸುಮಾರು 7 ಗಂಟೆ ಸುಮಾರಿಗೆ ಮಲ್ಲಾಘಟ್ಟ ಗ್ರಾಮಕ್ಕೆ ಹೋಗಿ 2ನೇ ಆರೋಪಿಯ ಮನೆಯ ಕೊಟ್ಟಗೆ ಬಳಿ ಹೋದಾಗ ಸದರಿ ಕೊಟ್ಟಿಗೆ ಬೀಗ ಹಾಕಲಾಗಿದ್ದು, ಅದನ್ನು 2ನೇ ಆರೋಪಿಯಿಂದಲೇ ತೆಗೆಸಿ ನೋಡಿದಾಗ ಜೋಳದ ಒಣ ಕಡ್ಡಿಗಳನ್ನು ರಾಶಿ ಹಾಕಲಾಗಿದ್ದು, ಅದನ್ನು ಸರೆಸಿ ಪರಿಶೀಲಸಿದಾಗ ಅದರಲ್ಲಿ ಒಂದು ದೊಡ್ಡ ಪ್ಲಾಸ್ಟಿಕ್ ಚೀಲದ ಬಂಡಲ್ ಇದ್ದು ಅದನ್ನು ಪರಿಶೀಲಸಿದಾಗ ಸದರಿ ಬಂಡಲ್ ನಲ್ಲಿ ಸೀರೆಯ ಸಣ್ಣ ಸಣ್ಣ ಬಂಡಲ್ ಗಳು ಕಂಡುಬಂದಿದ್ದು, ಸೀರೆಗಳನ್ನು ಲೆಕ್ಕ ಮಾಡಿ ನೋಡಲಾಗಿ ಸುಮಾರು 128 ಸೀರೆಗಳು ಇದ್ದು, ಸದರಿ ಸೀರಗಳ ಮೌಲ್ಯ ತಲಾ 150 ರೂ.ಗಳೆಂದು ವಾಣಿಜ್ಯ ಇಲಾಖೆಯ ಅಧಿಕಾರಿಯಾಗಿದ್ದ ಬಿ.ವಿ. ಮಂಜುನಾಥ್ ರವರ ಮುಖಾಂತರ ಮೌಲ್ಯ ಮಾಪನ ಮಾಡಿಸಿ ನಂತರ ತಿಳಿದುಕೊಂಡಿರುವುದಾಗಿ, ಒಟ್ಟು ಸೀರೆಗಳ ಮೌಲ್ಯ ರೂ.19,200/- ಆಗಿದ್ದು, ಸದರಿ ಸೀರೆಗಳನ್ನು ವಶಕ್ಕೆ ಪಡೆದು ಪೋಲಿಸರಿಗೆ ಹಸ್ತಾಂತರಿಸಿ ಆರೋಪಿಗಳ ವಿರುದ್ದ ನಿಪಿ.1 ರಂತೆ ದೂರು ದಾಖಲಿಸಿದ್ದು, ನಿಪಿ.2 ರ ಪಂಚನಾಮೆಯಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು, ಸೀರೆಗಳನ್ನು ವಶಕ್ಕೆ ಪಡೆಯುವ ಕಾಲಕ್ಕೆ ತಮ್ಮ ತಂಡದಲ್ಲಿದ್ದ ವಿಡಿಯೋ ಗ್ರಾಫರ್ ಅದನ್ನು ಚಿತ್ರೀಕರಿಸಿದ ನಂತರ ತಾನು ವಿಡಿಯೋ ಸಂಬಂಧವಾಗಿ ಸಿಡಿಯನ್ನು ಪೋಲಿಸರಿಗೆ ಹಸ್ತಾಂತರಿಸಿದ್ದು, ಆ ಸಮಯದಲದ್ಲಿ ಪೋಲಿಸರು ನಿಪಿ.3 ರಂತೆ ಪಂಚನಾಮೆ ಬರೆದು ನಿಪಿ. 4 ರಂತೆ ಸಿಡಿಯನ್ನು ವಶಕ್ಕೆ ಪಡೆದುಕೊಂಡಿದ್ದು, ಆರೋಪಿತರು ಮತದಾರರಿಗೆ ಹಂಚಿ ಚುನಾವಣಾ ಅಕ್ರಮ ಮಾಡಲು ಇಟ್ಟುಕೊಡಿದ್ದು, ತಾವು ವಶಕ್ಕೆ ಪಡೆದ ಸೀರೆಗಳು ಈಗ ನ್ಯಾಯಾಲಯ ಮುಂದಿರುವ ಸೀರೆಗಳಾಗಿದ್ದು, ಆ ಸೀರೆಗಳು ಎರಡು ರಟ್ಟಿನ ಬಾಕ್ಸ್ ಗಳಲ್ಲಿದ್ದು ಒಂದೊಂದು ರಟ್ಟಿನ ಬಾಕ್ಸ್ ಅನ್ನು ಪ್ರತ್ಯೇಕವಾಗಿ ಮುದ್ದೆ ಮಾಲು 1 ಮತ್ತು 2 ಎಂದು ಗುರುತಿಸಿರುವುದಾಗಿ ನುಡಿದಿರುತ್ತಾರೆ.

**9.** ಆರೋಪಿ ಪರ ವಕೀಲರು ಪ್ರಾಸಾ.1 ರವರನ್ನು ಪಾಟೀ ಸವಾಲಿಗೆ ಒಳಪಡಿಸಿದ್ದು ಸದರಿ ಪಾಟೀ ಸವಾಲಿನಲ್ಲಿ ತನ್ನನ್ನು ಚುನಾವಣಾ ನೀತಿ ಸಂಹಿತೆ ಉಲ್ಲಂಘನೆಯಾಗದಂತೆ ತಡೆಯುವ ತಂಡಕ್ಕೆ ಸದಸ್ಯನಾಗಿ ನೇಮಕ ಮಾಡಿದ್ದ ಬಗ್ಗೆ ಆದೇಶವನ್ನು ಪೋಲಿಸರಿಗಾಗಲೀ ನ್ಯಾಯಾಲಯಕ್ಕಾಗಲೀ ಹಾಜರುಪಡಿಸಿಲ್ಲ ಎಂದು ನುಡಿದಿರುತ್ತಾರೆ.

**10.** ಈ ಪ್ರಕರಣದಲ್ಲಿ ಅಭಿಯೋಜನೆಯು ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ-2 ರವರನ್ನು ಪ್ರಾಸಾ-2 ಎಂದು ವಿಚಾರಣೆಗೆ ಒಳಪಡಿಸಿರುತ್ತಾರೆ. ಪ್ರಾಸಾ.2 ಸದಾಶಿವಯ್ಯ ರವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 05.05.2018 ರಂದು ತಾನು ಮತ್ತು ಚಾಸಾ.3 ರವರಿಗೆ ಕುಣಿಗಲ್ ವಿಧಾನಸಭಾ ಚುನವಾಣಾ ಪ್ರಯುಕ್ತ ಫ್ಲೆಯಿಂಗ್ ಸ್ಕ್ವಾಡ್ ನ ಸದಸ್ಯರಾಗಿ ಚುನಾವಣಾ ಅಕ್ರಮ ತಡೆಯಲು ಚಾಸಾ.1 ರವರ ಜೊತೆ ನಿಯೋಜಿಸಲಾಗಿದ್ದು, ಚಾಸಾ.1 ರವರು ತಮ್ಮ ಇಲಾಖಾ ವಾಹನದಲ್ಲಿ ಕುಣಿಗಲ್ ನ ಮಲ್ಲಾಘಟ್ಟದ ಲಕ್ಷ್ಮಣರವರ ಕೊಟ್ಟಿಗೆಯಲ್ಲಿ ಚುನಾವಣಾ ಅಕ್ರಮ ಎಸಗಲು ಸೀರೆಗಳನ್ನು ಬಚ್ಚಿಟ್ಟಿದ್ದಾರೆಂದು ಕೊಟ್ಟಿಗೆ ಒಳಗೆ ಹೋಗಿ ಪರಿಶೀಲಿಸಿದಗ ಜೋಳದ ಮೇವನ್ನು ಹೊದಸಿ ಕೆಳಗೆರಡು ದೊಡ್ಡ ರಟ್ಟಿನ ಬಾಕ್ಸ್ ಗಳು ಇದ್ದು ಅವುಗಳನ್ನು ಪರಿಶೀಲಿಸಿದಾಗ ಸುಮಾರು 128 ಸೀರೆಗಳು ಇದ್ದು, ಅವುಗಳನ್ನು ಪಂಚರ ಸಮಕ್ಷಮ ಪಂಚನಾಮೆ ಮಾಡಿ ವಶಕ್ಕೆ ಪಡೆದುಕೊಂಡಿದ್ದು, ಆ ಸೀರೆಗಳನ್ನು ತಾನು ನ್ಯಾಯಾಲಯ ಮುಂದೆ ನೋಡುತ್ತಿದ್ದು, ಅವುಗಳನ್ನು ಈಗಾಗಲೇ ಮುದ್ದೆ ಮಾಲು 1 ಮತ್ತು 2 ಎಂದು ಗುರುತಿಸಿದ್ದು, ಸದರಿ ಪಂಚನಾಮೆಗೆ ತಾನು ಸಹಿ ಮಾಡಿದ್ದು, ಆ ಸಮಯದಲ್ಲಿ ಆರೋಪಿತರು ಹಾಜರಿರುವುದಾಗಿ ನುಡಿದಿರುತ್ತಾರೆ.

**11.** ಆರೋಪಿ ಪರ ವಕೀಲರು ಪ್ರಾಸಾ.2 ರವರನ್ನು ಪಾಟೀ ಸವಾಲಿಗೆ ಒಳಪಡಿಸಿದ್ದು ಸದರಿ ಪಾಟೀ ಸವಾಲಿನಲ್ಲಿ ನಾವು ಸ್ಥಳಕ್ಕೆ ಹೋದಾಗ ಸದರಿ ಕೊಟ್ಟಿಗೆ ಯಾರ ಮಾಲೀಕತ್ವಕ್ಕೆ ಸೇರಿತ್ತೆಂದು ತಾನು ವಿಚಾರಣೆ ಮಾಡಿಲ್ಲ, ನಂತರದಲ್ಲಿ ಸಂಬಂಧಪಟ್ಟ ಅಧಿಕಾಗಳಿಂದ ಕೊಟ್ಟಿಗೆ ಬಗ್ಗೆ ದಾಖಲೆ ಪರಿಶೀಲಿಸಿಲ್ಲ ಎಂದು ನುಡಿದಿರುತ್ತಾರೆ.

**12.** ಈ ಪ್ರಕರಣದ ಅಭಿಯೋಜನೆಯು ಮತೋರ್ವ ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ-3 ರವರನ್ನು ಪ್ರಾಸಾ-3 ಎಂದು ವಿಚಾರಣೆಗೆ ಒಳಪಡಿಸಿರುತ್ತಾರೆ. ಪ್ರಾಸಾ.3 ಪರಮೇಶ್ವರಪ್ಪ ರವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 05.05.2018 ರಂದು ತಾನು ಮತ್ತು ಚಾಸಾ.3 ರವರಿಗೆ ಕುಣಿಗಲ್ ವಿಧಾನಸಭಾ ಚುನವಾಣಾ ಪ್ರಯುಕ್ತ  ಫ್ಲೇಯಿಂಗ್ ಸ್ಕ್ವಾಡ್ ನ ಸದಸ್ಯರಾಗಿ ಚುನಾವಣಾ ಅಕ್ರಮ ತಡೆಯಲು ಚಾಸಾ.1 ರವರ ಜೊತೆ ನಿಯೋಜಿಸಲಾಗಿದ್ದು, ಚಾಸಾ.1 ರವರು ತಮ್ಮ ಇಲಾಖಾ ವಾಹನದಲ್ಲಿ ಕುಣಿಗಲ್ ನ ಮಲ್ಲಾಘಟ್ಟದ ಲಕ್ಷ್ಮಣರವರ ಕೊಟ್ಟಿಗೆ ಬಳಿ ತಮ್ಮನ್ನು ಹಾಗೂ ಚಾಸಾ.6 ಮತ್ತು 7 ರವರನ್ನು ಕರೆದುಕೊಂಡು ಹೋಗಿದ್ದು,ಸದರಿ ಕೊಟ್ಟಿಗೆಯಲ್ಲಿ ಚುನಾವಣಾ ಅಕ್ರಮ ಎಸಗಲು ಸೀರೆಗಳನ್ನು ಬಚ್ಚಿಟ್ಟಿದ್ದಾರೆಂದು ಕೊಟ್ಟಿಗೆ ಒಳಗೆ ಹೋಗಿ ಪರಿಶೀಲಿಸಿದಾಗ ಜೋಳದ ಮೇವನ್ನು ಹೊದಸಿ ಕೆಳಗೆರಡು ದೊಡ್ಡ ರಟ್ಟಿನ ಬಾಕ್ಸ್ ಗಳು ಇದ್ದು ಅವುಗಳನ್ನು ಪರಿಶೀಲಿಸಿದಾಗ ಸುಮಾರು 128 ಸೀರೆಗಳು ಇದ್ದು, ಅವುಗಳನ್ನು ಪಂಚರ ಸಮಕ್ಷಮ ಪಂಚನಾಮೆ ಮಾಡಿ ವಶಕ್ಕೆ ಪಡೆದುಕೊಂಡಿದ್ದು, ಆ ಸೀರೆಗಳನ್ನು ತಾನು ನ್ಯಾಯಾಲಯ ಮುಂದೆ ನೋಡುತ್ತಿದ್ದು, ಅವುಗಳನ್ನು ಈಗಾಗಲೇ ಮುದ್ದೆ ಮಾಲು 1 ಮತ್ತು 2 ಎಂದು ಗುರುತಿಸಿದ್ದು, ಸದರಿ ಪಂಚನಾಮೆಗೆ ತಾನು ಸಹಿ ಮಾಡಿರುವುದಾಗಿ ನುಡಿದಿರುತ್ತಾರೆ .

**13.** ಈ ಪ್ರಕರಣದ ಅಭಿಯೋಜನೆಯು ಮಹಜರ್  ಸಾಕ್ಷಿದಾರರಾದ ಚಾಸಾ-6 ರವರನ್ನು ಪ್ರಾಸಾ-4 ಎಂದು ವಿಚಾರಣೆಗೆ ಒಳಪಡಿಸಿರುತ್ತಾರೆ. ಪ್ರಾಸಾ.4 ನಾಗರಾಜು ಟಿ.ಜಿ ರವರು ತಮ್ಮ ಸಾಕ್ಷ್ಯದಲ್ಲಿ ಈ ಪ್ರಕರಣದ ಬಗ್ಗೆ ತನಗೆ ಗೊತ್ತಿಲ್ಲ, ತಾನು ಯಾವುದೇ ನಿಪಿ.2 ರ ಸ್ಥಳ ಪಂಚನಾಮೆಯಲ್ಲಿ ಭಾಗವಹಿಸಿರುವುದಿಲ್ಲ, ನಿಪಿ.2 ರಲ್ಲಿ ಬರೆದಿರುವ ವಿಚಾರಗಳು ತನಗೆ ತಿಳಿದಿರುವುದಿಲ್ಲ, 7 ವರ್ಷಗಳ ಹಿಂದೆ ಪೋಲಿಸ್ ಠಾಣೆಯಲ್ಲಿ ಪೋಲಿಸರ ಕೋರಿಕೆಯ ಮೇರೆಗೆ ಸಹಿ ಮಾಡಿದ್ದು ಎಂದು ಸಂಪೂರ್ಣವಾಗಿ ಅಭಿಯೋಜನೆ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇವರನ್ನು ಸಹಾಯಕ ಸರ್ಕಾರಿ ಅಭಿಯೋಜಕರು ಪಾಟೀ ಸವಾಲಿಗೆ ಒಳಪಡಿಸಿದ್ದರು ಸದರಿ ಪಾಟೀ ಸವಾಲಿನಲ್ಲಿ ಅಭಿಯೋಜನೆ ಸಾಕ್ಷಿಗೆ ಯಾವುದೇ ಪೂರಕವಾದ ಹೇಳಿಕೆಯನ್ನು ನೀಡಿರುವುದಿಲ್ಲ.

**14.** ಈ ಪ್ರಕರಣದ ಅಭಿಯೋಜನೆಯು ಮತ್ತೋರ್ವ ಮಹಜರ್ ಸಾಕ್ಷಿದಾರರಾದ ಚಾಸಾ-9 ರವರನ್ನು ಪ್ರಾಸಾ-5 ಎಂದು ವಿಚಾರಣೆಗೆ ಒಳಪಡಿಸಿರುತ್ತಾರೆ. ಪ್ರಾಸಾ.5 ಅಜಂ ಪಾಷ ರವರು ತಮ್ಮ ಸಾಕ್ಷ್ಯದಲ್ಲಿ ಈ ಪ್ರಕರಣದ ಬಗ್ಗೆ ತನಗೆ ಗೊತ್ತಿಲ್ಲ, ತಾನು ಯಾವುದೇ ನಿಪಿ.3ರ ಸ್ಥಳ ಮಹಜರ್ ನಲ್ಲಿ ಭಾಗವಹಿಸಿರುವುದಿಲ್ಲ, ನಿಪಿ.3 ರಲ್ಲಿ ಬರೆದಿರುವ ವಿಚಾರಗಳು ತನಗೆ ತಿಳಿದಿರುವುದಿಲ್ಲ, 7 ವರ್ಷಗಳ ಹಿಂದೆ ಪೋಲಿಸ್ ಠಾಣೆಯಲ್ಲಿ ಪೋಲಿಸರ ಕೋರಿಕೆಯ ಮೇರೆಗೆ ಸಹಿ ಮಾಡಿದ್ದು ಎಂದು ಸಂಪುರ್ಣವಾಗಿ ಅಭಿಯೋಜನೆ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇವರನ್ನು ಸಹಾಯಕ ಸರ್ಕಾರಿ ಅಭಿಯೋಜಕರು ಪಾಟೀ ಸವಾಲಿಗೆ ಒಳಪಡಿಸಿದ್ದರು ಸದರಿ ಪಾಟೀ ಸವಾಲಿನಲ್ಲಿ ಅಭಿಯೋಜನೆ ಸಾಕ್ಷಿಗೆ ಯಾವುದೇ ಪೂರಕವಾದ ಹೇಳಿಕೆಯನ್ನು ನೀಡಿರುವುದಿಲ್ಲ.

**15.** ಈ ಪ್ರಕರಣದ ಅಭಿಯೋಜನೆಯು ಇತರ ಸಾಕ್ಷಿದಾರರಾದ ಚಾಸಾ-11 ರವರನ್ನು ಪ್ರಾಸಾ-6 ಎಂದು ವಿಚಾರಣೆಗೆ ಒಳಪಡಿಸಿರುತ್ತಾರೆ. ಪ್ರಾಸಾ.6 ನಾಗರಾಜು ರವರು ತಮ್ಮ ಸಾಕ್ಷ್ಯದಲ್ಲಿ 2018ರಲ್ಲಿ ಚಾಸಾ.1 ರವರನ್ನು Flying squad ಅಧಿಕಾರಿಯಾಗಿ ಜಿಲ್ಲಾಧಿಕಾರಿಗಳು ನೇಮಿಸಿದ್ದು, ಸದರಿ ಆದೇಶವನ್ನು ನಿಪಿ.5 ರಂತೆ ಚಾಸಾ.1 ರವರಿಗೆ ಜಾರಿ ಮಾಡಿ ಅವರನ್ನು ಕರ್ತವ್ಯಕ್ಕೆ ನಿಯೋಜಿಸಲಾಗಿದ್ದು,ಮುಂದುವರೆದು, ತನಿಖಾಧಿಕಾರಿಯ ನಿವೇದನೆಯ ಮೇರೆಗೆ ನಿಪಿ.6ರಂತೆ ಪಹಣಿಯನ್ನು ತನಿಖಾಧಿಕಾರಿಗೆ ಸಲ್ಲಿಸಿದ್ದು, ಸದರಿ ಪಹಣಿ ನೀಡಿದ ಕುರಿತು ತಮ್ಮ ಕಚೇರಿಯಿಂದ ತನಿಖಾಧಿಕಾರಿಗೆ ಪತ್ರ ಕಳುಹಿಸಿರುವುದಾಗಿ ನುಡಿದಿರುತ್ತಾರೆ.

**16.** ಈ ಪ್ರಕರಣದಲ್ಲಿ ಅಭಿಯೋಜನೆಯು ಮತ್ತೋರ್ವ ಮಹಜರ್ ಸಾಕ್ಷಿದಾರರಾದ ಚಾಸಾ.8 ರವರನ್ನು ಪ್ರಾಸಾ-7 ಎಂದು ವಿಚಾರಣೆಗೆ ಒಳಪಡಿಸಿರುತ್ತಾರೆ. ಪ್ರಾಸಾ.7 ಮೊಹಮದ್ ಇಸ್ತಿಯಾರ್ ರವರು ತಮ್ಮ ಸಾಕ್ಷ್ಯದಲ್ಲಿ ಈ ಪ್ರಕರಣದ ಬಗ್ಗೆ ತನಗೆ ಗೊತ್ತಿಲ್ಲ, ತಾನು ಯಾವುದೇ ನಿಪಿ.3ರ ಸ್ಥಳ ಮಹಜರ್ ನಲ್ಲಿ ಭಾಗವಹಿಸಿರುವುದಿಲ್ಲ, ನಿಪಿ.3 ರಲ್ಲಿ ಬರೆದಿರುವ ವಿಚಾರಗಳು ತನಗೆ ತಿಳಿದಿರುವುದಿಲ್ಲ, ನಿಪಿ.3ಕ್ಕೆ ಸುಮಾರು 10 ವರ್ಷಗಳ ಹಿಂದೆ ಪೋಲಿಸ್ ಠಾಣೆಯಲ್ಲಿ ಪೋಲಿಸರ ಕೋರಿಕೆಯ ಮೇರೆಗೆ ಸಹಿ ಮಾಡಿದ್ದು ಎಂದು ಸಂಪುರ್ಣವಾಗಿ ಅಭಿಯೋಜನೆ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇವರನ್ನು ಸಹಾಯಕ

ಸರ್ಕಾರಿ ಅಭಿಯೋಜಕರು ಪಾಟೀ ಸವಾಲಿಗೆ ಒಳಪಡಿಸಿದ್ದರು ಸದರಿ ಪಾಟೀ ಸವಾಲಿನಲ್ಲಿ ಅಭಿಯೋಜನೆ ಸಾಕ್ಷಿಗೆ ಯಾವುದೇ ಪೂರಕವಾದ ಹೇಳಿಕೆಯನ್ನು ನೀಡಿರುವುದಿಲ್ಲ.

**17.** ಈ ಪ್ರಕರಣದಲ್ಲಿ ಅಭಿಯೋಜನೆಯು ತನಿಖಾಧಿಕಾರಿ ಸಾಕ್ಷಿದಾರರಾದ ಚಾಸಾ.12 ರವರನ್ನು ಪ್ರಾಸಾ-8 ಎಂದು ವಿಚಾರಣೆಗೆ ಒಳಪಡಿಸಿರುತ್ತಾರೆ. ಪ್ರಾಸಾ.8 ಶ್ರೀಧರ್ ಎಸ್ ರವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 05.05.2018 ರಂದು ತಾನು ರಾತ್ರಿ ಠಾಣಾಧಿಕಾರಿ ಕರ್ತವ್ಯದಲ್ಲಿದ್ದು, ಮಧ್ಯರಾತ್ರಿ 12.40 ರ ಸಮಯದಲ್ಲಿ ಚಾಸಾ.1 ರವರು ನೀಡಿದ ನಿಪಿ.1 ರಂತೆ ದೂರನ್ನು ಪಡೆದು ಎನ್ ಸಿ ಆರ್ 340/2018 ನ್ನು ದಾಖಲಿಸಿಕೊಂಡಿದ್ದು, ನಂತರ ಅನುಮತಿಗಾಗಿ ಅದೇ ದಿನ ನ್ಯಾಯಾಲಯಕ್ಕೆ ನಿಪಿ.7 ರಂತೆ ಪ್ರ.ವ.ವರದಿಯನ್ನು ದಾಖಲಿಸಲು ಮನವಿ ಸಲ್ಲಿಸಿದ್ದು, ದಿನಾಂಕಃ 06.05.2018 ರಂದು ಬೆಳಿಗ್ಗೆ ಜಾವ 3.00 ರ ಸಮಯಕ್ಕೆ ನ್ಯಾಯಾಲಯದ ಹೆಚ್ ಸಿ-297 ಯೋಗೇಶ್ ರವರು ಠಾಣೆಗೆ ನೀಡಿದ ಪಿರ್ಯಾದನ್ನು ಸ್ವಿಕರಿಸಿ ಪ್ರಕರಣವನ್ನು ದಾಖಲಿಸಿಕೊಂಡಿದ್ದು, ತಮ್ಮ ಸಿಬ್ಬಂದಿಯವರು ನ್ಯಾಯಾಲಯದಿಂದ ತಂದು ನಿಪಿ.8 ರಂತೆ ನೀಡಿದ ನಿವೇದನೆಯಲ್ಲಿ ಸಹಿ ಮಾಡಿದ್ದು, ಮುಂದುವರಿದು, ಚಾಸಾ.1 ರವರು ಹಾಜರುಪಡಿಸಿದ 128 ಬಣ್ಣ ಬಣ್ಣದ ಸೀರೆಗಳನ್ನು ಅದೇ ದಿನ ಬೆಳಗಿನ ಜಾವ 3.30 ರಿಂದ 4.30 ರ ಸಮಯದಲ್ಲಿ ತಮ್ಮ ಠಾಣಾ ಆವರಣದಲ್ಲಿ ಚಾಸಾ.7 ರವರ ಸಮಕ್ಷಮ ನಿಪಿ.2 ರಂತೆ ಅಮಾನತು ಪಂಚನಾಮೆ ಜರುಗಿಸಿದ್ದು , ನಿಪಿ.2 ರ ಮಾಲುಗಳ ಕುರಿತು ನಿಪಿ.9 ರಂತೆ ಮಾಲು ಪಟ್ಟಿ ಸಂಃ40/18 ಅನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದು, ಮುಂದಿನ ತನಿಖೆಗಾಗಿ ಚಾಸಾ.13 ರವರಿಗೆ ಕಡತವನ್ನು ಹಸ್ತಾಂತರಿಸಿರುವುದಾಗಿ ನುಡಿದಿರುತ್ತಾರೆ.

**18.** ಈ ಪ್ರಕರಣದಲ್ಲಿ ಅಭಿಯೋಜನೆಯು ಮತ್ತೋರ್ವ ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ.4 ರವರನ್ನು ಪ್ರಾಸಾ.9 ಎಂದು ವಿಚಾರಣೆಗೆ ಒಳಪಡಿಸಿರುತ್ತಾರೆ. ಪ್ರಾಸಾ.9 ರವಿಕುಮಾರ ರವರು ತಮ್ಮ ಸಾಕ್ಷ್ಯದಲ್ಲಿ ತಾನು ಕೆಎ-06ಜಿ-754 ಟಾಟ ಸುಮೋ ದ ಚಾಲಕನಾಗಿ 2018ರಲ್ಲಿ ಚುನಾವಾಣೆ ಕರ್ತವ್ಯಕ್ಕೆ ನಿಯೋಜನೆಯಾಗಿದ್ದು, ಅದರಂತೆ ದಿನಾಂಕ 05.05.2018 ರಂದು ರಾತ್ರಿ 8.45 ಗಂಟೆಯ ಸಮಯದಲ್ಲಿ ಚಾಸಾ.1 ರವರು Flying squad ಅಧಿಕಾರಿಯಾಗಿದ್ದು, ಅವರಿಗೆ ಕರೆ ಬಂದಿದ್ದು, ಅದರಂತೆ ತಾನು ಮತ್ತು

ಚಾಸಾ.1 ರಿಂದ 3 ರವರು ಮಲ್ಲಘಟ್ಟದ ಒಂದನೇ ಆರೋಪಿಯ ಮನೆಗೆ ರಾತ್ರಿ 9.15 ರಿಂದ 9.20 ರ ವೇಳೆಗೆ ಹೋಗಿದ್ದಾಗಿ, ಆ ಸಮಯದಲ್ಲಿ ತಾನು ತನ್ನ ವಾಹನದಲ್ಲಿ ಇದ್ದು, ಚಾಸಾ.1 ರಿಂದ 3 ರವರು ಒಂದನೇ ಆರೋಪಿಯ ಮನೆಗೆ ಹೋಗಿ ಮಹಜರ್ ಮಾಡಿದ್ದು , ಸದರಿ ಮಹಜರ್ ಮಾಡುವಾಗ, ತಾನು ಹೋಗಿ ನೋಡಿದಾಗ, ದನದ ಕೊಟ್ಟಿಗೆಯಲ್ಲಿ ಒಂದು ಬಂಡಲ್ ಸೀರೆ ಇದ್ದು , ತಾನು ಘಟನೆಯ ಕುರಿತು ಪೊಲೀಸರಿಗೆ ಹೇಳಿಕೆ ನೀಡಿರುವುದಾಗಿ, ಸದರಿ ಸೀರೆ ಬಂಡಲ್ ನಲ್ಲಿ 128 ಸೀರೆ ಇದ್ದು, ಸದರಿ ಸೀರೆಗಳ ಬೆಲೆ ರೂ.150/- ರಿಂದ 200/- ಇರುವುದಾಗಿ, ಆ ಸೀರೆಗಳನ್ನು ಈಗಾಗಲೇ ಎಂಓ-1 ಎಂದು ಗುರುತಿಸಿರುವ ಸೀರೆಗಳೇ ಆಗಿರುವುದಾಗಿ ನುಡಿದಿರುತ್ತಾರೆ .

**19.** ಆರೋಪಿ ಪರ ವಕೀಲರು ಪ್ರಾಸಾ.9 ರವರನ್ನು ಪಾಟೀ ಸವಾಲಿಗೆ ಒಳಪಡಿಸಿದ್ದು ಸದರಿ ಪಾಟೀ ಸವಾಲಿನಲ್ಲಿ ತನ್ನನ್ನು ಕರ್ತವ್ಯಕ್ಕೆ ನಿಯೋಜಿಸಿದ ಬಗ್ಗೆ ದಾಖಲೆಗಳನ್ನು ಪೋಲಿಸರಿಗೆ ನೀಡಿರುವುದಿಲ್ಲ ಎಂದು ನುಡಿದಿರುತ್ತಾರೆ.

**20.** ಈ ಪ್ರಕರಣದಲ್ಲಿ ಅಭಿಯೋಜನೆಯವರು ಮತ್ತೋರ್ವ ತನಿಖಾಧಿಕಾರಿ ಸಾಕ್ಷಿದಾರರಾದ ಚಾಸಾ.13 ರವರಿಗೆ ಬಹಳಷ್ಟು ಬಾರಿ ಸಮನ್ಸ್ ಮತ್ತು ಜಾಮೀನು ಸಹಿತ ವಾರೆಂಟ್ ಗಳನ್ನು ಹೊರಡಿಸಿದ್ದರೂ ಅಭಿಯೋಜನೆಯು ಸದರಿಯವರನ್ನು ವಿಚಾರಣೆಗೆ ಒಳಪಡಿಸಲು ವಿಫಲರಾಗಿರುತ್ತಾರೆ. ಚಾಸಾ.1 ರವರು ವಶಪಡಿಸಿಕೊಂಡಿದ್ದ ಮಾಲಿನ ಬೆಲೆಯ ಬಗ್ಗೆ ವರದಿ ನೀಡಿದ ವರದಿಯನ್ನು ನಿಪಿ.10 ಎಂದು ಆರೋಪಿ ಪರ ವಕೀಲರ ಸಮ್ಮತಿ ಮೇರೆಗೆ ಗುರುತಿಸಿದ್ದು, ಚಾಸಾ.10 ರವರನ್ನು ವಿಚಾರಣೆಯಿಂದ ಕೈಬಿಡಲಾಯಿತು. ಈ ಪ್ರಕರಣದಲ್ಲಿ ಅಭಿಯೋಜನೆಯವರು ಮತ್ತೋರ್ವ ಮಹಜರ್ ಸಾಕ್ಷಿದಾರರಾದ ಚಾಸಾ.7 ರವರಿಗೆ ಬಹಳಷ್ಟು ಬಾರಿ ಸಮನ್ಸ್ ಮತ್ತು ಉದ್ಘೋಷಣೆಗಳನ್ನು ಹೊರಡಿಸಿದ್ದರೂ ಅಭಿಯೋಜನೆಯು ಸದರಿಯವರನ್ನು ವಿಚಾರಣೆಗೆ ಒಳಪಡಿಸಲು ವಿಫಲರಾಗಿರುತ್ತಾರೆ. ಈ ಪ್ರಕರಣದಲ್ಲಿ ಅಭಿಯೋಜನೆಯವರು ಮತ್ತೋರ್ವ ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ.5 ರವರಿಗೆ ಬಹಳಷ್ಟು ಬಾರಿ ಸಮನ್ಸ್ ಮತ್ತು ಉದ್ಘೋಷಣೆಗಳನ್ನು ಹೊರಡಿಸಿದ್ದರೂ ಅಭಿಯೋಜನೆಯು ಸದರಿಯವರನ್ನು ವಿಚಾರಣೆಗೆ ಒಳಪಡಿಸಲು ವಿಫಲರಾಗಿರುತ್ತಾರೆ.

ಮುಂದುವರಿದು, ಪಂಚನಾಮೆ ಸಾಕ್ಷಿದಾರರಾದ ಪ್ರಾಸಾ-4, 5 ಮತ್ತು 7 ರವರು ಅಭಿಯೋಜನೆ ಪರವಾಗಿ ಪೂರಕವಾದ ಸಾಕ್ಷ್ಯವನ್ನು ನುಡಿದಿರುವುದಿಲ್ಲ. ಹಾಗಾಗಿ ಅಭಿಯೋಜನೆ ನಿಪಿ.2 ರಂತೆ ಪಂಚನಾಮೆಯನ್ನು ಜರುಗಿಸಿದ ವಿಚಾರವನ್ನು ರುಜುವಾತು ಪಡಿಸಿದಂತೆ ಆಗುವುದಿಲ್ಲ. ಮುಖ್ಯವಾಗಿ ದೂರದಾರ ಸಾಕ್ಷಿದಾರರಾದ ಚಾಸಾ.1 ರವರುತಮ್ಮ ತಂಡದ ಸಿಬ್ಬಂದಿಗಳನ್ನು ಹೊರತುಪಡಿಸಿ ಯಾವುದೇ ಖಾಸಗಿ ಸಾಕ್ಷಿದಾರರು ಪಂಚನಾಮೆಗೆ ಹಾಜರಿರಲಿಲ್ಲ ಎನ್ನುವ ಸೂಚನೆಯನ್ನು ಒಪ್ಪಿರುತ್ತಾರೆ. ಜೊತೆಗೆ ಘಟನಾ ಸ್ಥಳ ಯಾರಿಗೆ ಸೇರಿತ್ತು ಎನ್ನುವ ಕುರಿತು ಅಭಿಯೋಜನೆ ಯಾವುದೇ ದಾಖಲೆಗಳನ್ನು ಹಾರಜರುಪಡಿಸಿರುವುದಿಲ್ಲ.

ಬಹು ಮುಖ್ಯವಾದ ಮತ್ತೊಂದು ಅಂಶವೇಂದರೆ ಪತ್ತೆಹಚ್ಚುವಿಕೆಯು (ಡಿಸ್ಕವರಿ) ಒಂದು ದುರ್ಬಲ ರೀತಿಯ ಸಾಕ್ಷ್ಯವಾಗಿದ್ದು, ಅದರ ಮೇಲೆ ಸಂಪೂರ್ಣವಾಗಿ ಅವಲಂಭಿತವಾಗಲು ಸಾಧ್ಯವಿಲ್ಲ ಮತ್ತು ಗಂಭೀರ ಸ್ವರೂಪದ ಪ್ರಕರಣದಲ್ಲಿ ಇದರ ಆಧಾರದ ಮೇಲೆ ಶಿಕ್ಷೆವಿಧಿಸಲು ಸಾಧ್ಯವಿಲ್ಲ. ಒಮ್ಮೆ ಪತ್ತೆಹಚ್ಚುವಿಕೆಯನ್ನು ರುಜುವಾತುಪಡಿಸವಲ್ಲಿ ಅಭಿಯೋಜನೆ ವಿಫಲವಾದರೆ ಅಭಿಯೋಜನೆಯು ಪ್ರಕರಣವನ್ನು ಪುಷ್ಟಿಕರೀಸಲು ಬೇರೆ ಏನು ಉಳಿದಂತೆ ಆಗುವುದಿಲ್ಲ. ಈ ಹಂತದಲ್ಲಿ ಈ ನ್ಯಾಯಾಲಯ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ಉಲ್ಲೇಖಿತ ತೀರ್ಪು **2008 AIAR (Criminal) 133** (ಮಣಿ ವಿರುದ್ಧ ತಮಿಳುನಾಡು ಸರ್ಕಾರ), - ನೀಡಿದ ತೀರ್ಪನ್ನು ಉಲ್ಲೇಖಿಸಲಾಗಿದೆ. ಸದರಿ ತೀರ್ಪನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ಈ ರೀತಿಯಾಗಿ ಅಭಿಪ್ರಾಯ ವ್ಯಕ್ತಪಡಿಸಿರುತ್ತದೆ.

"*B. Evidence – Appreciation of – Circumstantial evidence – Case of prosecution hinging on recoveries allegedly made on pointing out of accuse – Discovery being a weak kind of evidence cannot be wholly relied upon – Conviction in a serious matter cannot be based upon the same*"

ಈಗಾಗಲೇ ಚರ್ಚಿಸಿದಂತೆ ಅಭಿಂಯೋಜನೆ ಸ್ವಂತಂತ್ರ ಸಾಕ್ಷ್ಯಧಾರರ ಪೂರಕ ಸಾಕ್ಷ್ಯವನ್ನು ಹಾಜರುಪಡಿಸುವಲ್ಲಿ ವಿಫಲರಾಗಿರುತ್ತಾರೆ. ಹಾಗಾಗಿ ಅಭಿಯೋಜನೆ ಆರೋಪಿತರ ಮೇಲೆ ಹೊರಿಸಿದ ಆರೋಪವು ದೃಢಪಟ್ಟಂತೆ ಆಗುವುದಿಲ್ಲ .

**21.** ಈ ಪ್ರಕರಣದಲ್ಲಿ ಇಲಾಖಾ ಸಾಕ್ಷಿದಾರರನ್ನು ಹೊರತುಪಡಿಸಿ ಅಭಿಯೋಜನೆ ವಿಚಾರಣೆಗೆ ಒಳಪಡಿಸಿದ ಸ್ವತಂತ್ರ್ಯ ಮಹಜರ್ ಸಾಕ್ಷಿದಾರರಾದ ಪ್ರಾಸಾ.4, 5 ಮತ್ತು 7 ರವರು ಅಭಿಯೋಜನೆಗೆ ಸಂಪೂರ್ಣವಾಗಿ ವಿರುದ್ಧವಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಮೇಲಿನ ಚರ್ಚೆಗಳಿಂದ ಈ ಪ್ರಕರಣದಲ್ಲಿ ಅಭಿಯೋಜನೆ ಆರೋಪಿತರು ಚುನಾವಣೆಯ ಸದಾಚಾರ ನೀತಿ ಸಂಹಿತೆ ಉಲ್ಲಂಘನೆ ಮಾಡಿರುತ್ತಾರೆ ಎಂಬ ಅಂಶಗಳನ್ನು ನ್ಯಾಯಾಲಯದಲ್ಲಿ ರುಜುವಾತುಪಡಿಸಲು ಸಂಪೂರ್ಣವಾಗಿ ವಿಫಲರಾಗಿರುತ್ತಾರೆ.

**22.** ಅಭಿಯೋಜನೆಯ ಪರ ಸಾಕ್ಷಿದಾರರು ಆರೋಪಿತರ ವಿರುದ್ಧ ನ್ಯಾಯಾಲಯದಲ್ಲಿ ನೀಡಲಾದ ಸಾಕ್ಷ್ಯವನ್ನು ಆರೋಪಿತರು ತಮ್ಮ ಹೇಳಿಕೆಯಲ್ಲಿ ಅಲ್ಲಗಳೆದಿರುತ್ತಾರೆ. ಹಾಗೂ ತಮ್ಮ ಪರವಾಗಿ ಯಾವುದೇ ಸಾಕ್ಷ್ಯ ಇರುವುದಿಲ್ಲ ಎಂಬುದಾಗಿ ನುಡಿದಿರುತ್ತಾರೆ. ಆದುದರಿಂದ ಆರೋಪಿತರ ಮೇಲಿರುವ ಆರೋಪವನ್ನು ರುಜುವಾತುಪಡಿಸುವ ಹೊಣೆಗಾರಿಕೆ ಅಭಿಯೋಜನೆಯವರ ಮೇಲೆ ಇರುತ್ತದೆ. ಆದುದರಿಂದ ಸದರಿ ಅಂಶಗಳನ್ನು ಅಭಿಯೋಜನೆಯವರು ಸಂಪೂರ್ಣವಾಗಿ ರುಜುವಾತುಪಡಿಸಲು ವಿಫಲರಾಗಿರುತ್ತಾರೆ. ಆದುದರಿಂದ ಸಂಶಯದ ಲಾಭವನ್ನು ಆರೋಪಿತರಿಗೆ ನೀಡುವುದಾಗಿ ಈ ನ್ಯಾಯಾಲಯವು ಅಭಿಪ್ರಾಯಪಟ್ಟು, ಸದರಿ ಅಂಶ ಸಂಖ್ಯೆ 1 ಕ್ಕೆ ನಕಾರಾತ್ಮಕವಾಗಿ ಉತ್ತರಿಸಿದೆ.

**23.** **ಅಂಶ ಸಂಖ್ಯೆ.2:-** ಈ ಮೇಲ್ಕಂಡ ವಿವಾದಾಂಶದಲ್ಲಿ ಚರ್ಚಿಸಲಾದ ಕಾರಣಗಳಿಂದಾಗಿ, ಅಂತಿಮ ಆದೇಶ ಈ ಕೆಳಕಂಡಂತೆ.

## ::ಆದೇಶ::

ದಂಡ ಪ್ರಕ್ರಿಯಾ ಸಂಹಿತೆ ಕಲಂ 255 (1)ರ ಅಡಿಯಲ್ಲಿ ವರ್ತಿಸುತ್ತಾ ಆರೋಪಿತರ ವಿರುದ್ಧ ಭಾರತೀಯ ದಂ.ಸಂ.ಕಲಂ.171(ಇ) ರ ಅಡಿಯಲ್ಲಿ ಹೊರಿಸಲಾದಂತಹ ಆರೋಪಗಳಿಂದ ಆರೋಪಿತರನ್ನು ದೋಷಮುಕ್ತಗೊಳಿಸಿ ಬಿಡುಗಡೆ ಮಾಡಲಾಗಿದೆ.

ಆರೋಪಿತರು ದಂಡ ಪ್ರಕ್ರಿಯಾ ಸಂಹಿತೆ ಕಲಂ. 437(ಎ)ರ ಅಡಿಯಲ್ಲಿ ಬರೆದುಕೊಟ್ಟ ಜಾಮೀನು ಹಾಗೂ

ಮುಚ್ಚಳಿಕೆ ಪತ್ರವನ್ನು 6 ತಿಂಗಳ ನಂತರ ರದ್ದುಪಡಿಸಲು ಆದೇಶಿಸಲಾಗಿದೆ.

ಮು.ಮಾ .1 ಮತ್ತು 2. 128 ಸೀರೆಗಳು ತುಂಬಿದ ಎರಡು ರಟ್ಟಿನ ಬಾಕ್ಸ್ ಗಳು, ನಿರುಪಯುಕ್ತ ವಸ್ತುವಾಗಿರುವುದರಿಂದ ಮೇಲ್ಮನವಿ ಅವಧಿ ಮುಗಿದ ನಂತರ ಅದನ್ನು ನಾಶಪಡಿಸಲು ಕಛೇರಿಯವರಿಗೆ ಆದೇಶಿಸಲಾಗಿದೆ.

*(ಶೀಘ್ರಲಿಪಿಗಾರರಿಗೆ ಉಕ್ತಲೇಖನವನ್ನು ಕೊಟ್ಟು ಅವರು ಗಣಕಯಂತ್ರದ ಮೂಲಕ ಲಿಪ್ಯಂತರ ಮಾಡಿದ ಬಳಿಕ ಅನುಲಿಪಿಯನ್ನು ಪರಿಶೀಲಿಸಿ, ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ ಈ ದಿನ ಅಂದರೆ ದಿನಾಂಕ* ***1ನೇ ಜುಲೈ 2026*** *ರಂದು ಘೋಷಿಸಿದ್ದೇನೆ.)*

***Sd/-***

**( ಸುಜಾತ ಎ ಬಿ)**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾ.ದಂ. ಕುಣಿಗಲ್**

## ::ಅನುಬಂಧ::

**ಅಭಿಯೋಜನೆಯ ಪರ ವಿಚಾರಣೆಗೊಳಪಟ್ಟ ಸಾಕ್ಷಿ ದಾರರ ಪಟ್ಟಿ:-**

| | | |
|---|---|---|
| ಪ್ರಾಸಾ-1 | : | ಕೈಲಾಸ ಮೂರ್ತಿ |
| ಪ್ರಾಸಾ-2 | : | ಸದಾಶಿವಯ್ಯ |
| ಪ್ರಾಸಾ-3 | : | ಪರಮೇಶ್ವರಪ್ಪ |
| ಪ್ರಾಸಾ-4 | : | ನಾಗರಾಜು ಟಿ.ಜಿ |
| ಪ್ರಾಸಾ-5 | : | ಅಜಂ ಪಾಷ |
| ಪ್ರಾಸಾ-6 | : | ನಾಗರಾಜು |
| ಪ್ರಾಸಾ-7 | : | ಮೊಹಮ್ಮದ್ ಇಸ್ತಿಯಾರ್ |
| ಪ್ರಾಸಾ-8 | : | ಶ್ರೀಧರ್ ಎಸ್ |
| ಪ್ರಾಸಾ-9 | : | ರವಿಕುಮಾರ |

**ಅಭಿಯೋಜನೆಯ ಪರ ಗುರುತಿಸಲ್ಪಟ್ಟ ದಾಖಲೆಗಳ ಪಟ್ಟಿ:-**

| | | |
|---|---|---|
| ನಿಪಿ-1 | : | ದೂರು |
| ನಿಪಿ-1(ಎ) | : | ಪ್ರಾಸಾ.1 ರವರ ಸಹಿ |
| ನಿಪಿ-1(ಬಿ) | : | ಪ್ರಾಸಾ.8 ರವರ ಸಹಿ |
| ನಿಪಿ-2 | : | ಸ್ಥಳ ಪಂಚನಾಮೆ |

| | | |
|---|---|---|
| ನಿಪಿ-2(ಎ) | : | ಪ್ರಾಸಾ.1 ರವರ ಸಹಿ |
| ನಿಪಿ-2(ಬಿ) | : | ಪ್ರಾಸಾ.2 ರವರ ಸಹಿ |
| ನಿಪಿ-2(ಸಿ) | : | ಪ್ರಾಸಾ.4 ರವರ ಸಹಿ |
| ನಿಪಿ-2(ಡಿ) | : | ಪ್ರಾಸಾ.8 ರವರ ಸಹಿ |
| ನಿಪಿ-3 | : | ಸ್ಥಳ ಪಂಚನಾಮೆ |
| ನಿಪಿ-3(ಎ) | : | ಪ್ರಾಸಾ.1 ರವರ ಸಹಿ |
| ನಿಪಿ-3(ಬಿ) | : | ಪ್ರಾಸಾ.5 ರವರ ಸಹಿ |
| ನಿಪಿ-3(ಸಿ) | : | ಪ್ರಾಸಾ.7 ರವರ ಸಹಿ |
| ನಿಪಿ-4 | : | ಸಿಡಿ |
| ನಿಪಿ- 5 | : | ಆದೇಶ ಪತ್ರ |
| ನಿಪಿ-5(ಎ) | : | ಪ್ರಾಸಾ-6 ರವರ ಸಹಿ |
| ನಿಪಿ-6 | : | ಪಹಣಿ ಕೋರಿದ ಬಗ್ಗೆ ಪತ್ರ |
| ನಿಪಿ-6(ಎ) | : | ಪ್ರಾಸಾ-6 ರವರ ಸಹಿ |
| ನಿಪಿ-7 | : | ಪ್ರಥಮ ವರ್ತಮಾನ ವರದಿ |
| ನಿಪಿ-7(ಎ) | : | ಪ್ರಾಸಾ-8 ರವರ ಸಹಿ |
| ನಿಪಿ-8 | : | ಸ್ವೀಕೃತಿ |
| ನಿಪಿ-8(ಎ) | : | ಪ್ರಾಸಾ-8 ರವರ ಸಹಿ |
| ನಿಪಿ-9 | : | ಸ್ವತಿನ ಪಟ್ಟಿ |
| ನಿಪಿ-9(ಎ) | : | ಪ್ರಾಸಾ-8 ರವರ ಸಹಿ |
| ನಿಪಿ-10 | : | ವರದಿ |

**ಆರೋಪಿ ಪರ ಸಾಕ್ಷಿ ದಾರರುಗಳ ಪಟ್ಟಿ:-** -ಇಲ್ಲ-

**ಆರೋಪಿಯ ಪರ ಗುರುತಿಸಲ್ಪಟ್ಟ ದಾಖಲೆಗಳ ಪಟ್ಟಿ:-** -ಇಲ್ಲ-

**ಮುದ್ದೆಮಾಲು ದಾಖಲೆಗಳ ಪಟ್ಟಿ:-**

ಮಾ.ಮು.1 ಮತ್ತು 2 : 128 ಸೀರೆಗಳು ತುಂಬಿದ ಎರಡು ರಟ್ಟಿನ ಬಾಕ್ಸ್ ಗಳು,

***Sd/-***

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ. ಕುಣಿಗಲ್ .**